# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ಯವರ ನ್ಯಾಯಾಲಯ ರಾಣೆಬೆನ್ನೂರು

**ಸಿ.ಸಿ.710/2024**

ಪಿರ್ಯಾಧಿ : ಅಬಕಾರಿ ಉಪ ನಿರೀಕ್ಷಕರು,
ರಾಣೆಬೆನ್ನೂರು ವಲಯ .

**ವಿರುದ್ಧ**

ಆರೋಪಿತರು: ಕರಕಪ್ಪ ತಂದೆ ಸಿದ್ದಪ್ಪ ಪೂಜಾರ,
ವಯಸ್ಸುಃ 70 ವರ್ಷ, ವಾಸಃ ಬೆನಕನಕೊಂಡ,
ತಾಃ ರಾಣೆಬೆನ್ನೂರು, ಜಿಃ ಹಾವೇರಿ.

**ಕಲಂ 313 ಅಡಿಯಲ್ಲಿ ಆರೋಪಿಯ ಹೇಳಿಕೆ**

**ಪ್ರಶ್ನೆ 1 :-** ಸಾಕ್ಷಿದಾರರು ತಮ್ಮ ವಿಚಾರಣೆಯಲ್ಲಿ ಹೇಳಿರುವುದನ್ನು ಕೇಳಿಸಿಕೊಂಡಿದ್ದೀರಾ ?

ಉತ್ತರ :-

**ಪ್ರಶ್ನೆ 2 :- ಫ್ರಾಸಾ-1 ಗೀತಾ ತೆಗ್ಗಿಹಾಳ ಹಾಗೂ ಫ್ರಾ -3 ಹನುಮಂತ ರಂಗಣ್ಣನವರರವರು ತಮ್ಮ ಸಾಕ್ಷ್ಯದಲ್ಲಿಃ-** ದಿನಾಂಕ 20.04.2024 ರಂದು ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಹಿನ್ನೆಲೆಯಲ್ಲಿ ಕುಮಾರಪಟ್ಟಣಂನಲ್ಲಿ ಅವರು ಅಬಕಾರಿ ಅಕ್ರಮಗಳ ಕುರಿತು ಗಸ್ತು ಮಾಡುತ್ತಿದ್ದಾಗ ಅಕ್ರಮ ಮದ್ಯ ಸಾಗಾಟದ ಬಗ್ಗೆ ಬಂದ ಖಚಿತ ಮಾಹಿತಿಯ ಮೇರೆಗೆ ಪಂಚರೊಂದಿಗೆ ಸ್ಥಳಕ್ಕೆ ಹೋಗಿ ವಾಹನಗಳನ್ನು ತಪಾಸಣೆ ಮಾಡುತ್ತಿದ್ದಾಗ ಆರೋಪಿತರಾದ ನೀವು ನಿಮ್ಮ ದ್ವಿಚಕ್ರ ವಾಹನ ಸಂಖ್ಯೆ ಕೆಎ-35/ಇಕೆ-5812 ರ ಟ್ಯಾಂಕ್ ಮೇಲೆ ಒಂದು ಚೀಲದಲ್ಲಿ ಅಕ್ರಮವಾಗಿ ಯಾವುದೇ ಪರವಾನಿಗೆ

ಇಲ್ಲದೇ ಮದ್ಯ ಸಾಗಾಟ ಮಾಡುತ್ತಿರುವಾಗ ಸಿಕ್ಕಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ, **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?**

ಉತ್ತರ :–

**ಪ್ರಶ್ನೆ 3 :–ಮುಂದುವರೆದು**, ಸದರಿ ಚೀಲವನ್ನು ಪರಿಶೀಲಿಸಿದಾಗ 90 ಮಿಲಿಯ 24 ಹೆಚ್‌ಸಿ ವಿಸ್ಕಿಯ ಟೆಟ್ರಾ ಪ್ಯಾಕ್‌ಗಳು ಹಾಗೂ 90 ಮಿಲಿಯ 24 ಓ.ಸಿ. ವಿಸ್ಕಿಯ ಟೆಟ್ರಾ ಪ್ಯಾಕ್ ಗಳು ಇರುವುದು ಕಂಡುಬಂದಿರುತ್ತದೆ. ನಂತರ ವಾಹನ ಹಾಗೂ ಮದ್ಯವನ್ನು ಅಮಾನತುಪಡಿಸಿಕೊಂಡು, ಪಂಚನಾಮೆ ತಯಾರಿಸಿ, ದೂರು ದಾಖಲಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**ಉತ್ತರ** :–

**ಪ್ರಶ್ನೆ 4 :–ಪ್ರಾಸಾ–5 ಮಂಜಪ್ಪ ಎಂ. ರವರು ತಮ್ಮ ಸಾಕ್ಷ್ಯದಲ್ಲಿಃ–** ದಿನಾಂಕ 20.05.2024 ರಂದು ಪ್ರಕರಣದ ಕಡತವನ್ನು ಚಾಸಾ-1 ರವರಿಂದ ಸ್ವೀಕರಿಸಿ, ವಶಪಡಿಸಿಕೊಂಡ ಮದ್ಯವನ್ನು ರಾಸಾಯನಿಕ ಪರೀಕ್ಷೆಗೆ ಹುಬ್ಬಳ್ಳಿಗೆ ಕಳುಹಿಸಿ, ಚಾಸಾ-4 ರವರ ಹೇಳಿಕೆ ಪಡೆದುಕೊಂಡು , ದ್ವಿಚಕ್ರ ವಾಹನದ ಮಾಲೀಕತ್ವದ ಕುರಿತು ಆರ್‌ಟಿಓ, ಹೊಸಪೇಟೆ ಇವರಿಗೆ ಪತ್ರ ಬರೆದು, ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-7 ರವರಿಗೆ ನೀಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?**

ಉತ್ತರ :-

**ಪ್ರಶ್ನೆ 5 :–ಪ್ರಾಸಾ–6 ಕೃಷ್ಣಪ್ಪ ರಾಮಪ್ಪರವರು ತಮ್ಮ ಸಾಕ್ಷ್ಯದಲ್ಲಿಃ–** ಸದರಿ ಪ್ರಕರಣದ ಮು.ಮಾ.1 ರಿಂದ 48 ರ ಟೆಟ್ರಾ ಪ್ಯಾಕ್‌ಗಳನ್ನು ಆರೋಪಿಯಾದ ನಿಮಗೆ ಅವರ ಮದ್ಯದ ಅಂಗಡಿಯಿಂದ ಮಾರಾಟ ಮಾಡಿರುತ್ತಾರೆ ಹಾಗೂ ಸದರಿ ಮಾರಾಟಕ್ಕೆ ಬಿಲ್ಲುಗಳನ್ನು ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?**

ಉತ್ತರ :-

**ಪ್ರಶ್ನೆ 6 :–ಫ್ರಾಸಾ–7 ಶಂಕರ್ ಗುಡದಾರರವರು ತಮ್ಮ ಸಾಕ್ಷ್ಯದಲ್ಲಿಃ –** ದಿನಾಂಕ 29.06.2024 ರಂದು ಪ್ರಕರಣದ ಕಡತವನ್ನು ಚಾಸಾ-6 ರವರಿಂದ ಸ್ವೀಕರಿಸಿ, ದ್ವಿಚಕ್ರ ವಾಹನದ ಮಾಲೀಕತ್ವದ ಕುರಿತು ಆರ್‌ಟಿಓ, ಹೊಸಪೇಟೆ ಇವರಿಗೆ ಪತ್ರ ಬರೆದು ವರದಿ ಪಡೆದುಕೊಂಡು, ಮಾಲುಗಳ ಸರಬರಾಜಿನ ಕುರಿತು ಕೆಎಸ್‌ಬಿಸಿಎಲ್ ಡಿಪ್ಪೊ, ಹರಿಹರ ಇವರಿಂದ ವಶಪಡಿಸಿಕೊಂಡ ಮದ್ಯ ಚಾಸಾ-5 ರವರ ಅಂಗಡಿಗೆ ಸರಬರಾಜು ಆಗಿರುವ ಬಗ್ಗೆ ವರದಿ ಪಡೆದು, ಚಾಸಾ-5 ರವರಿಗೆ ನೋಟೀಸ್ ನೀಡಿ ಹೇಳಿಕೆ ಪಡೆದುಕೊಂಡು, ಆರೋಪಿಯಾದ ನಿಮ್ಮ ಸ್ವ-ಖುಷಿ ಹೇಳಿಕೆ ಪಡೆದುಕೊಂಡು ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. **ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?**

ಉತ್ತರ :-

**ಪ್ರಶ್ನೆ 7 :–** ನಿಮ್ಮ ಪರವಾಗಿ ಏನಾದರೂ ಹೇಳುವುದಿದೆಯಾ?

ಉತ್ತರ :–

**ಪ್ರಶ್ನೆ 8 :–** ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ?

ಉತ್ತರ :–

(**ಮೇಲಿನ ಕಲಂ 313 ಹೇಳಿಕೆಯನ್ನು ಆರೋಪಿತನಿಗೆ ಓದಿ ಹೇಳಿದಾಗ ಆರೋಪಿಯು ನೀಡಿದ ಉತ್ತರವನ್ನು ಯಥವತ್ತಾಗಿ ದಾಖಲಿಸಿಕೊಳ್ಳಲಾಯಿತು**)

ಸಹಿ/–

ದಿನಾಂಕಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ರಾಣೆಬೆನ್ನೂರು

**ಆರೋಪಿತನ ಸಹಿಃ**